**ಕರ್ನಾಟಕ ಸರ್ಕಾರ**

ಸಂ.ಡಿಟಿಇ/34/ಎಸಿಎಂ(1)/2017-18

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ,
ಬೆಂಗಳೂರು-560 001.
ದಿನಾಂಕ:10-08-2017.

**-:: ಜ್ಞಾಪನ ::-**

**ವಿಷಯ:-** 2017-18ನೇ ಸಾಲಿನಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮುಖಾಂತರ ಡಿಪ್ಲೋಮಾಧಾರಕರಿಗೆ ಲ್ಯಾಟರಲ್ ಎಂಟ್ರಿ ಬಿ.ಇ ಪ್ರವೇಶ ಸಂಬಂಧ ದಾಖಲಾತಿ ಪರಿಶೀಲನೆಗೆ ಉಪನ್ಯಾಸಕರನ್ನು ನಿಯೋಜಿಸುವ ಕುರಿತು.

**ಉಲ್ಲೇಖ:-** ಆಡಳಿತಾಧಿಕಾರಿಗಳು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಬೆಂಗಳೂರು ಇವರ ಪತ್ರ ಸಂ. ಇಡಿ/ಕೆಇಎ/ಆಡಳಿತ/ಸಿ.ಆರ್-/2016-17,ದಿ:01-08-2017.

-0000000-

2017-18ನೇ ಸಾಲಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮುಖಾಂತರ ಡಿಪ್ಲೋಮಾಧಾರಕರಿಗೆ ಲ್ಯಾಟರಲ್ ಎಂಟ್ರಿ ಸ್ಕೀಂ ಮೂಲಕ ನೇರವಾಗಿ 02ನೇ ವರ್ಷ/03ನೇ ಸೆಮಿಸ್ಟರ್ ಬಿ.ಇ/ಬಿ.ಆರ್ಕ್ ಪ್ರವೇಶ ಪ್ರಕ್ರಿಯೆಗೆ ಸಂಬಂಧಿಸಿದಂತೆ ಅಭ್ಯರ್ಥಿಗಳ ಮೂಲ ದಾಖಲಾತಿ ಪರಿಶೀಲನೆಗಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಬೆಂಗಳೂರು ಇವರಿಗೆ ಸಹಕರಿಸುವ ನಿಟ್ಟಿನಲ್ಲಿ ಈ ಕೆಳಗೆ ನಮೂದಿಸಿರುವ ಸರ್ಕಾರಿ ಪಾಲಿಟೆಕ್ನಿಕ್‌ಗಳಿಂದ ಉಪನ್ಯಾಸಕರುಗಳನ್ನು ಸಂಸ್ಥೆಯ ಪ್ರಾಂಶುಪಾಲರುಗಳು **ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಮಲ್ಲೇಶ್ವರಂ 18ನೇ ಕ್ರಾಸ್, ಬೆಂಗಳೂರು** ಸಹಾಯ ಕೇಂದ್ರಕ್ಕೆ ಈ ತಕ್ಷಣದಿಂದ ಜಾರಿಗೆ ಬರುವಂತೆ ಮುಂದಿನ ಆದೇಶದವರೆಗೆ ನಿಯೋಜಿಸತಕ್ಕದ್ದು.

| ಕ್ರ. ಸಂ | ಪರಿಶೀಲನಾ ಅಧಿಕಾರಿಯಾಗಿ ಕಾರ್ಯನಿರ್ವಹಿಸಬೇಕಾಗಿರುವ ಉಪನ್ಯಾಸಕರುಗಳ ಹೆಸರು ಶ್ರೀಯುತರಾದ |
|---|---|
| 1. | ಕೆ.ಶೀಲಾ, ಆ.ಶ್ರೇ.ಉಪನ್ಯಾಸಕರು(ಸಿವಿಲ್), ಸರ್ಕಾರಿ ಎಸ್.ಜೆ ಪಾಲಿಟೆಕ್ನಿಕ್, ಬೆಂಗಳೂರು |
| 2. | ಟಿ.ಪ್ರಕಾಶ್, ಆ.ಶ್ರೇ.ಉಪನ್ಯಾಸಕರು(ಮೆಕ್ಯಾನಿಕಲ್), ಸ್ಕೂಲ್ ಆಫ್ ಮೈನ್ಸ್, ಕೆ.ಜಿ.ಎಫ್ |

ಮೇಲೆ ನಮೂದಿಸಿರುವ ಆಯ್ಕೆ ಶ್ರೇಣಿ ಉಪನ್ಯಾಸಕರುಗಳನ್ನು ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳು ತಮ್ಮ ಸಂಸ್ಥೆಯ ವತಿಯಿಂದ **ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಮಲ್ಲೇಶ್ವರಂ 18ನೇ ಕ್ರಾಸ್, ಬೆಂಗಳೂರು** ಸಹಾಯ ಕೇಂದ್ರಕ್ಕೆ ದಾಖಲೆಗಳ ಪರಿಶೀಲನೆಗಾಗಿ ಈ ತಕ್ಷಣದಿಂದ ಜಾರಿಗೆ ಬರುವಂತೆ **ದಿ:11-08-2017 ರಿಂದ ದಿ:14-08-2017ರವರೆಗೆ ನಿಯೋಜಿಸಲಾಗಿದೆ. ಹಾಗೂ ದಾಖಲೆಗಳ ಪರಿಶೀಲನೆ ಮುಗಿದ ನಂತರದಿ:15-08-2017ರಂದು ಸಂಬಂಧಪಟ್ಟ ಕಛೇರಿ/ಸಂಸ್ಥೆಗಳಲ್ಲಿ ವರದಿ ಮಾಡಿಕೊಳ್ಳತಕ್ಕದ್ದು**. ಪರಿಶೀಲನಾ ಅಧಿಕಾರಿಯಾಗಿ ಉಪನ್ಯಾಸಕರುಗಳು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ನಿಯೋಜಿಸಲಾಗಿರುವ ಆಯಾ ಸಹಾಯ ಕೇಂದ್ರದಲ್ಲಿನ ನೋಡಲ್ ಅಧಿಕಾರಿಯವರಲ್ಲಿ ವರದಿ ಮಾಡಿಕೊಂಡು ಕರ್ತವ್ಯಕ್ಕೆ ಹಾಜರಾಗಲು ಸೂಚಿಸಲಾಗಿದೆ.

**ನಿರ್ದೇಶಕರು**

ಗೆ,

ಮೇಲ್ಕಂಡ ಉಪನ್ಯಾಸಕರುಗಳಿಗೆ - ಪ್ರಾಂಶುಪಾಲರ ಮುಖಾಂತರ.

10/8/17

**ಪ್ರತಿ:**

1. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – ಪ್ರವೇಶ ಪ್ರಕ್ರಿಯೆಗೆ ಯೋಜಿಸಲಾಗುವ ಅಧಿಕಾರಿಗಳ ಕುರಿತು ಮೇಲ್ಕಂಡ ಸಂಸ್ಥೆಗಳ ಪ್ರಿನ್ಸಿಪಾಲರುಗಳನ್ನು ಸಂಪರ್ಕಿಸಬಹುದಾಗಿರುತ್ತದೆ.
2. ಆಡಳಿತಾಧಿಕಾರಿಗಳು, ತಾ. ಶಿ. ನಿ. ಬೆಂಗಳೂರು.
3. ನಿರ್ದೇಶಕರ ಆಪ್ತ ಶಾಖೆಗೆ, ತಾ. ಶಿ. ನಿ. ಬೆಂಗಳೂರು.
4. ಸಂಯೋಜನಾಧಿಕಾರಿಗಳು, ತಾ. ಶಿ. ನಿ. ಬೆಂಗಳೂರು – ಸದರಿ ಜ್ಞಾಪನ ಪತ್ರವನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸುವುದು.
5. ಇಎಸ್‌ಟಿ(8) ವಿಭಾಗಕ್ಕೆ, ತಾ. ಶಿ. ನಿ. ಬೆಂಗಳೂರು.
6. ಕಛೇರಿ ಪ್ರತಿ.

**ಪ್ರತಿ ಮಾಹಿತಿಗಾಗಿ:**

ಸರ್ಕಾರದ ಅಧೀನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ(ಉನ್ನತ ಶಿಕ್ಷಣ), ಬಹುಮಹಡಿಗಳ ಕಟ್ಟಡ, ಬೆಂಗಳೂರು.